**<u>ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು ಹುಕ್ಕೇರಿ</u>**

O.S No.206 /2020

DW- 1

ಹೆಸರು : ಅರುಣ್ ಗುರುಸಿದ್ದಪ್ಪ ಲಾಡಿ

ವಯಸ್ಸು : 53 ವರ್ಷ

ಉದ್ಯೋಗ : ಖಾಸಗಿ ಕೆಲಸ

ವಾಸಸ್ಥಳ : ಬೆಳಗಾವಿ.

(ದಿನಾಂಕ 05.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**<u>ಮುಖ್ಯ ವಿಚಾರಣೆಃ ಸಾಕ್ಷಿ ತಾನು ಸ್ವತಃ ಹೇಳುತ್ತೇನೆ ಎಂದು ನ್ಯಾಯಾಲಯದ ಮುಂದೆ ಸ್ವ-ಇಚ್ಛೆಯಿಂದ ವಿಚಾರಣೆಗೆ ಒಳಪಟ್ಟಿರುತ್ತಾರೆ.</u>**

1. ನಮ್ಮ ತಂದೆ ತೀರಿಕೊಳ್ಳುವ ಮುಂಚೆ 20 ವರ್ಷ ನಾನು ಮದುವೆ ಆದ್ಮೇಲೆ ಎಂಟು ತಿಂಗಳು ಹೊರಗೆ ಹಾಕಿದ್ದಾರೆ. ನನ್ನನ್ನು ನಂತರ ನಮ್ಮ ಅಣ್ಣ ತಮ್ಮನನ್ನು ಇಬ್ಬರೂ ಹೊರಗೆ ಹಾಕಿದ್ದಾರೆ. ಅವತ್ತಿನಿಂದ ನಾವು ಹೊರಗೆ ಇದ್ದೆವು. ನನ್ನ ತಂದೆಗೆ ಹಾರ್ಟ್ ಪ್ರಾಬ್ಲಮ್ ಇತ್ತು. ನಾನು ನಂತರ ಬರೋದು ಹೋಗೊದು ಮಾಡುತ್ತಿದ್ದೆ. ನನ್ನ ಅಣ್ಣನಿಗೆ ಗಾಡಿ ಒಡೆಯಕ್ಕೆ ಬರ್ತಿದ್ದಿಲ್ಲ, ನಾನೇ ಬರ್ತಿದ್ದೆ, ನಾನೇ ನೋಡ್ತಿದ್ದೆ. ನಂತರ ನಾವೆಲ್ಲಾ ಟ್ರೀಟ್ಮೆಂಟ್ ಮಾಡಿದ್ವಿ. ಒಂದು ತಿಂಗಳು ನಮ್ಮ ಮನೆಯಲ್ಲಿದ್ದರು. ನಮ್ಮ ಮನೆಯಲ್ಲೇ ಇದ್ರು.

2. ನಾನು ಇಲ್ಲೊಂದು ಶೋರೂಮ್ ಇಟ್ಟಿದ್ದೆ. ಹೀರೋ ಅಂಡ್ ಶೋರೂಮ್ ಇಟ್ಟಿದ್ದೆ. ಇಲ್ಲಿ ಒಂದು ಚೂರು ಲಾಸ್ ಆಯ್ತು. ಅದರ ನಂತರ ಏನು ಮಾಡಿದೆ, ಇಲ್ಲೇ ನಾನು ಏನೋ ಸ್ವಲ್ಪ ಬೆಳಿಬೇಕು ಅಂತ ಹೇಳಿ ಏನಾದರೂ ಸ್ವಲ್ಪ ದುಡ್ಡು ಕೊಡ್ರಿ ಅಂತ ಕೇಳಿದೆ. ನಮ್ಮ ತಂದೆ ಕೇಳಿದೆ. ಏನಾದರೂ ದುಡ್ಡು ಕೊಡ್ರಿ ಇಲ್ಲೇ ನಾನು ಬೆಳಿತ್ತೀನಿ. ಇಲ್ಲೇ ಸ್ವಲ್ಪ ಲಾಸ್ ಆಗಿದೆ, ಬೆಳಿತ್ತೀನಿ ಅಂತ ಅಂದಾಗ, ನೋಡ್ತೀವಿ ನೋಡೋಣ ಕೊಡೋಣ ಕೊಡೋಣ ಅಂತ ನನ್ನ ತಂದೆ ಅಂದ್ರು. ಅವಾಗ ಯಾಕಂದ್ರೆ ಹಿಡ್ಕೊಂಡ್ ಟೈಮ್ ನಾಗ ಅವರು ಮಾಡಿದ್ರು . ಪ್ರಾಪರ್ಟಿ ಮಾಡಿದ್ರು. ದುಡ್ಡು ಗಿಡ್ಡು ಎಲ್ಲಾ ಆಯ್ತು. ಏನೋ ಒಂದು ಚೂರು ಮಾಡೋಣ ಅಂತ ಅಂದ್ರು. ನಂತರ ಅದನ್ನ ಸೇಲ್ ಮಾಡಿದ್ರು. ನಂತರ ಹೊರಗೆ ಒಂದು ಮೇಲ್ಗಡೆ ಇದನ್ನ ಮಾಡೋಣ. ಅದರ ಚೌಕಟ್ಟು ಅದು ಇದು ಎಲ್ಲಾ ಸಂಥಿಂಗ್ ಏನು ಇತ್ತು, ಮಟೀರಿಯಲ್, ಬಿಲ್ಡಿಂಗ್ ಮಟೀರಿಯಲ್ಸ್. ಅದನ್ನ ಏನೋ ಮೇಲ್ಗಡೆ ಕಟ್ಕೊಂಡು, ನಾವು ಇಲ್ಲಿ ಇರೋಣ ಆಗೆ ಇಂಗೆ ಅಂತ ಅಂದಾಗ ಆಯ್ತು, ನೀನು ಇರು, ಅವರು ಇರೋದು ಬೇಡ. ನೀವು ಇರು, ಅವ್ರ್ ಅವ್ರ್ ಬಂದ್ರು, ಡಿವೈಡೇಶನ್ ತೋರಿಸಾಕ ಹತ್ತಿದ್ರು. ನನಗೆ

ಹಾಗಾದ್ರೆ ಸರಿಯಿಲ್ಲ ಅಂತ ಅಂದೆ. ನಮ್ಮ ಮಿಸೆಸ್ ಏನು ಅಂದ್ರು, ನಾವೆಲ್ಲಾ ಅಂದ್ರು ಜಾಬ್ ಮಾಡ್ತಾ ಇದ್ದೀವಿ, ಎಲ್ಲಾದ್ರೂ ಎಲ್ಲ ಬೆಳಗಾಂ ದಲ್ಲಿ ಸೆಟಲ್ ಆಗಿರೋಣ. ಯಾಕೆ ಸುಮ್ಮನೆ ಜಗಳ ಆಗುತ್ತೆ ಅಂತ ಇದ್ದುಬಿಟ್ರು. ನಾವಂತೂ ಸುಮ್ಮನೆ ಎಲ್ಲಿದ್ದುಬಿಟ್ವಿ. ಆಮೇಲೆ ಬರ್ತಾ ಬರ್ತಾ ಇವರಿಗೆ ಗಂಡುಮಕ್ಕಳದ ಆಸ್ತಿ ಅಂತ ಗಂಡುಮಕ್ಕಳ ಇಂಟರೆಸ್ಟ್ ಹೋಗ್ಬಿಡ್ತು . ಗಂಡುಮಕ್ಕಳನ್ನು ನೋಡಲಿಲ್ಲ. ದೊಡ್ಡವನು ನೋಡ್ಲಿಲ್ಲ. ಅಣ್ಣನೂ ನೋಡ್ಲಿಲ್ಲ. ತಮ್ಮನ್ನೂ ನೋಡ್ಲಿಲ್ಲ. ಮಗನನ್ನೂ ನೋಡ್ಲಿಲ್ಲ. ಅವಾಯ್ಡ್ ಮಾಡ್ಕೊಂತ ಬಂದರು ಹೆಣ್ಣುಮಕ್ಕಳಿಗೆ ಬಹಳ ಇಂಟರೆಸ್ಟ್. ಲಾಸ್ಟ್ ಟೈಮ್ ಆದಾಗ ನಾನು ನಮ್ಮ ಅಣ್ಣ ಹೋಗಬೇಕಾದ್ರೆ, ಬಾಯಾಗ ನೀರು ಹಾಕೋ ಕೊಡಲಿಲ್ಲ. ಕಣ್ಣಿಗೆ ಮಡಿಸಿನ ಹಾಕೋದು, ಡ್ರಾಪ್ಸ್ ಹಾಕೋದು ಮಾಡಿ ಮಲಗಿಸಿಬಿಟ್ಟರು.

3. ನನ್ನ ತಂದೆ 80 ಲಕ್ಷ ಹಣ ದುಡಿದಿದ್ದ. ದುಡ್ಡು ಎಲ್ಲಾ ತಗೊಂಡ್ರು. ಮತ್ತೆ ಈಗ ಅವರು 10 ಲಕ್ಷ ರೂಪಾಯಿ ಕೊಡ ಅಂತ ಹೇಳಿ ಕಾಂಪ್ರಮೈಸ್ ಮಾಡೋಕೆ ಬಂದ್ರು. ನನ್ನ ತಾಯಿಯಿಂದ ಏನು ಬೇಡ. ಆನ್‌ಸಿಸ್ಟರಲ್ ಪ್ರಾಪರ್ಟಿಯಲ್ಲಿ ಮಾತ್ರ ಕೊಡಿ. ಅದರ ಒಳಗಡೆ 30 ಗುಂಟೆ ಬರುತ್ತೆ. ನನ್ನ ಮಕ್ಕಳದು ಎಲ್ಲಾ ಎಜುಕೇಶನ್ ಆಗಿದೆ, ಅವರು ಜಾಬ್ ಮಾಡ್ತಾ ಇದ್ದಾರೆ. ಒಂದು ಸ್ವಲ್ಪ ಏನೋ ಮ್ಯಾರೇಜ್ ಮಾಡ್ಬೇಕು ಅಂತ ಹೇಳಿ ಅಬ್ಬಬ್ಬ ಅಂದ್ರೆ ಒಂದು 10 ರಿಂದ 15 ಲಕ್ಷ ಬರುತ್ತೆ. ಅಷ್ಟೊಂದು ಕೊಟ್ಟು ಬಿಡ್ರಿ. ಅವಳು ಜೀವಂತ ಇರುವರೆಗೂ ನನಗೇನೂ ಬೇಡ. ಅವಳು ಜೀವಂತ ಇರುವರೆಗೂ ಅವರೆ ಎಲ್ಲ ತಗೊಳ್ಳಿ. ಖುಷಿಯಾಗಿ ಕೊಟ್ಟ ಕೊಡ್ಲಿ ಇಲ್ಲಾಂದ್ರೆ ಅದೂ ಬೇಡ, ಅದಕ್ಕೂ ಒಪ್ಪಿಗೆ ಇದೆ. ಅವಳ ಹೇಗೆ ಗಿಫ್ಟ್ ಡೀಡ್ ಮಾಡಲಿ. ಹಂಗೆ ಅವಳು ತನ್ನ ಮಗಳ ಹತ್ತಿರ ಮಾಡಿದರೆ ಮಗಳಿಗೆ ಮಾಡ್ಲಿ, ಇಲ್ಲ ನನಗೆ ಮಾಡಿದರೆ ನನಗೆ ಮಾಡ್ಲಿ ಅಥವಾ ಎಲ್ಲರಿಗೂ ಅವರು ನಮ್ಮ ಮಕ್ಕಳಪ್ಪ ನಮಗೆ ಎಲ್ಲರೂ ಹಡಿದವರು ಅಂತ ಅಂದ್ರೆ ಎಲ್ಲರೂ ಹಡಿದವರಿಗೆ ಮಾಡ್ಲಿ. ನನಗೇನೂ ಬೇಡ ಅಂದ್ರೆ ಏನೂ ಬೇಡ. ನಾನು ಹಾರ್ಟ್, ಡಯಾಬಿಟಿಕ್ ಅದು ಇದು ಇದೆ. ಮಕ್ಕಳು ದುಡಿತಾ ಇದ್ದಾರೆ, ನನಗೇನೂ ಬೇಡ. ನನಗೆ ಈ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಬೇಡ, ನಾನು ಏನೂ ಕೇಳುವುದಿಲ್ಲ.

**( ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆಳರಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೇ**

**Sd/-**

(ಆದಿತ್ಯ ಆರ್. ಕಲಾಲ್)

ಸಿ ಜೆ ಮತ್ತು ಜೆ ಎಂ ಎಫ್ ಸಿ , ಹುಕ್ಕೇರಿ